ಮೂಲ ದಾವಾ ಸಂಖ್ಯೆ 35/2018

ಡಿ ಡಬ್ಲ್ಯೂ-1

**(ದಿನಾಂಕ 18.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ವಾದಿ ಪರ ಶ್ರೀ G.V ವಕೀಲರಿಂದಃ-**

ನಾವು ಗಂಡು ಮಕ್ಕಳು 4 ಜನ 3 ಹೆಣ್ಣುಮಕ್ಕಳು. ಪರಸಪ್ಪ ಎಲ್ಲರಿಗಿಂತ ದೊಡ್ಡವರು ಎಂದರೆ ಸರಿ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ. ಸರ್ವೆ ನಂಬರ 432/1 5 ಎಕರೆ 16 ಸಂಟ್ಸ್ ಇದೆ ಎಂದರೆ ಸರಿ. ಅದನ್ನು 2003 ರಲ್ಲಿ ಮಂಜಪ್ಪ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಐಟಂ ನಂಬರ 2 50 ಸೆಂಟ್ಸ್ ಇದೆ ಎಂದರೆ ಸರಿ. ನನ್ನ ಹಸರಿನಲ್ಲಿ ಅದು 1992 ರಲ್ಲಿ ಕ್ರಯ ಆಗಿದೆ ಎಂದರೆ ಸರಿ. ಐಟಂ ನಂಬರ 3 ಸರ್ವೆ ನಂಬರ 418/ಬಿ 5 1 ಎಕರೆ ನನ್ನ ಹೆಸರಿನಲ್ಲಿ ಇದೆ ಎಂದರೆ ನಾನೇ ಖರೀದಿ ಮಾಡಿರುತ್ತೇನೆ. ನಾನು ದುರ್ಗಮ್ಮರವರಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ತಂದೆ ಡಿಳ್ಳೆಪ್ಪ 2009 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿ ಹನುಮವ್ವ 2020 ರಲ್ಲಿ ಮರಣ ಹೊಂದಿರುತ್ತಾರೆ. ಐಂಟ ನಂಬರ 4 ಸರ್ವೆ ನಂಬರ 418 ಬಿ 6 1 ಎಕರೆ 50 ಸೆಂಟ್ಸ್ ಕೆಂಚಪ್ಪನ ಹೆಸರಿನಲ್ಲಿ ಕ್ರಯ ಆಗಿದೆ ಎಂದರೆ ಸರಿಯಲ್ಲ. ಐಟಂ ನಂಬರ 5 ಆಸ್ತಿ 2004 ರಲ್ಲಿ ಕ್ರಯ ಆಗಿದೆ ಎಂದರೆ ಸರಿಯಲ್ಲ. ಐಟಂ ನಂಬರ 6 ಸರ್ವೆ ನಂಬರ 432/2 2 ಎಕರೆ 31 ಸೆಂಟ್ಸ್ ವಾದಿ ಮತ್ತು ಪ್ರತಿವಾದಿ 2 ಮತ್ತು 3 ರವರ ಹೆಸರು ಜಂಟಿ ಇದೆ ಎಂದರೆ ಸರಿ. ಪರಸಪ್ಪ ಬಿರ್ಲಾ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು ಎಂದರೆ ಸರಿ. ನಾನು ಮತ್ತು ನನ್ನ ಅಣ್ಣ ಕಟ್ಟಡ ಕಾರ್ಮಿಕರಾಗಿ ಕೆಲಸಕ್ಕೆ ಹೋಗಿದ್ದೆವು ಎಂದರೆ ಸರಿ. ವಿದ್ಯಾ ನಗರದಲ್ಲಿ ಕೆಂಪು ಹಂಚಿನ ಮನೆ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ನಾನು ಮತ್ತು 4 ನೇ ಪ್ರತಿವಾದಿ ವಾದಿ ಮತ್ತು ಪ್ರತಿವಾದಿಗಳು ಒಟ್ಟಿಗೆ ಬಾಳುವೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. 1985 ರಲ್ಲಿ

ರೇಣುಕಮ್ಮನ ವಿವಾಹ ಆಗಿರುತ್ತದೆ ಎಂದರೆ ಸರಿ. ಆಗ ನನಗೆ 13 ವರ್ಷ ಎಂದರೆ ಸರಿ. 1996 ರಲ್ಲಿ ರತ್ನಮ್ಮನ ಮದುವೆ ಆಗಿರುತ್ತದೆ ಎಂದರೆ ಸರಿಯಲ್ಲ. 1998 ರಲ್ಲಿ ಆಗಿರುತ್ತದೆ. ವಾದಿ ಪರಸಪ್ಪನೇ ನಿಂತು ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1998 ರಲ್ಲಿ ಸಾಕಮ್ಮನ ಮದುವೆ ಆಯಿತು ಎಂದರೆ ಸರಿ. ಪರಸಪ್ಪನೇ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಮಾಹಿತಿ ನನಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ.

**(ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.